## ಭಗವದ್ಗೀತಾ ಚಿಂತನೆ

# ಭಗವದ್ಗೀತೆಯ ಸಾರಸರ್ವಸ್ವ

ಸ್ವಾಮಿ ಗೌತಮಾನಂದ

### ಯೋಗ ಎಂದರೇನು?

**'ಯೋಗ'** ಶಬ್ದವನ್ನು **'ಯುಜಿರ್ ಯೋಗೇ'** ಎಂಬ ಧಾತುವಿನಿಂದ ಜೋಡಿಸು ಎಂದೂ ಅಥವಾ **'ಯುಜ್ ಸಮಾಧೌ'** ಧಾತುವಿನಿಂದ ಏಕಾಗ್ರತೆ ಎಂದೂ ಅರ್ಥೈಸಬಹುದು. ಇದರಿಂದ, ಭಗವದ್ಗೀತೆಯಲ್ಲಿ ಬರುವ ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗಗಳಿಗೆ ಕ್ರಮವಾಗಿ ನಮ್ಮ ವ್ಯಕ್ತಿತ್ವದಲ್ಲಿರುವ ಕರ್ಮ, ಜ್ಞಾನ ಹಾಗೂ ಭಕ್ತಿಯ ಅಂಶಗಳನ್ನು, ಭಗವಂತನಲ್ಲಿ **ಜೋಡಿಸುವುದು** ಎಂದು ಅರ್ಥವಾಗುತ್ತದೆ. ರಾಜಯೋಗವೆಂದರೆ ಭಗವಂತನಲ್ಲಿ ನಮ್ಮ ಮನಸ್ಸನ್ನು ಏಕಾಗ್ರಗೊಳಿಸುವುದೆಂದೂ ಅರ್ಥವಾಗುತ್ತದೆ. ಈ ಎಲ್ಲ ಯೋಗಗಳನ್ನು ಭಗವದ್ಗೀತೆಯಲ್ಲಿ ವಿವರಿಸಲಾಗಿದೆ. ಅವೆಲ್ಲದರ ಗುರಿ ಬ್ರಹ್ಮಾನುಭವ ಅಥವಾ ಆತ್ಮಾನುಭವ. ತನ್ನ ಸ್ವರೂಪದ ಸಾಕ್ಷಾತ್ಕಾರವೆಂಬ ಅರ್ಥದಲ್ಲಿಯೂ ಯೋಗ ಶಬ್ದವು ಬಳಕೆಯಲ್ಲಿದೆ. ತನ್ನ ಸ್ವರೂಪವನ್ನು ಹೊಂದುವುದನ್ನು ಯೋಗ ಎಂದು ಪತಂಜಲಿ ಮಹರ್ಷಿಗಳು ತಮ್ಮ ಸೂತ್ರಗಳಲ್ಲಿ ವಿವರಿಸಿರುತ್ತಾರೆ (**'ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್'**).

> **ಶ್ರೀಕೃಷ್ಣನ ಸಂದೇಶದಲ್ಲಿ ಎರಡು ಭಾವನೆಗಳನ್ನು ನಾವು ನೋಡುತ್ತೇವೆ. ಮೊದಲನೆಯದು ಭಿನ್ನ ಭಿನ್ನ ಭಾವನೆಗಳ ಮಧ್ಯದಲ್ಲಿ ತೋರುವ ಸಾಮರಸ್ಯತೆ. ಎರಡನೆಯದೇ ಅನಾಸಕ್ತಿ. ಒಬ್ಬ ಮನುಷ್ಯ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡುತ್ತಿದ್ದರೂ, ಅವನು ಪೂರ್ಣಾತ್ಮನಾಗಬಹುದು. ಜೀವನದ ಪರಮಗುರಿಯನ್ನು ಮುಟ್ಟಬಹುದು.**
>
> – ಸ್ವಾಮಿ ವಿವೇಕಾನಂದ

ಸಾಮಾನ್ಯವಾಗಿ ಮಾನವನು ಇಂದ್ರಿಯ ಮತ್ತು ಮಾನಸಿಕ ಸುಖದ ಹುಡುಕಾಟದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಈ ಸುಖಕ್ಕೆ **'ಅಭ್ಯುದಯ'**(ಪ್ರಾಪಂಚಿಕ ಸುಖ)ವೆಂದು ಹೆಸರು. ಆದರೆ ಒಂದು ಹಂತದಲ್ಲಿ ಅವನಿಗೆ ಅವುಗಳ ಅನಿತ್ಯತೆ ಹಾಗೂ ಕ್ಷಣಿಕತ್ವದ ಬೋಧೆ ಯಾಗುತ್ತದೆ. ನಂತರ ಆತ ಶಾಶ್ವತಸುಖದ ಹುಡುಕಾಟವನ್ನು ಕೈಗೊಳ್ಳುತ್ತಾನೆ. ಅದು ಆತ್ಮಸಾಕ್ಷಾತ್ಕಾರದಿಂದ ಮಾತ್ರ ಲಭ್ಯ. ಈ ಆತ್ಮಸುಖವನ್ನೇ **'ನಿಶ್ರೇಯಸ'** ವೆಂದು ಕರೆಯುತ್ತಾರೆ.

ಭಗವದ್ಗೀತೆಯು ಮೇಲೆ ಹೇಳಿದ ಕ್ಷಣಿಕ ಹಾಗೂ ಶಾಶ್ವತ ಸುಖಗಳ ನಡುವೆ ಅತ್ಯಂತ ಕುಶಲತೆಯಿಂದ ಹೊಂದಾಣಿಕೆಯನ್ನುಂಟುಮಾಡುತ್ತದೆ. ಕರ್ಮಗಳಿಂದ ಭಗವಂತನನ್ನು ಆರಾಧಿಸುವುದೇ ಇಲ್ಲಿ ಗುರಿಯಾಗಿದೆ. ಅದಕ್ಕಾಗಿ ನಮ್ಮೆಲ್ಲ ಲೌಕಿಕ ಕರ್ಮಗಳನ್ನು ಈಶ್ವರನಿಗೆ ಅರ್ಪಿಸಬೇಕೆಂದು ಭಗವದ್ಗೀತೆಯು ಪ್ರತಿಪಾದಿಸುತ್ತದೆ.

---

ಪೂಜ್ಯ ಸ್ವಾಮೀಜಿಯವರು ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರು ಮತ್ತು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಲ್ಲಿ ಒಬ್ಬರು. ಇವರು ಉತ್ತಮ ಭಾಷಣಕಾರರು ಮತ್ತು ಬರಹಗಾರರು ಕೂಡ.

### ಭಗವದ್ಗೀತೆಯ ಅಧ್ಯಾಯಗಳ ಸಾರಾಂಶ

ಭಗವದ್ಗೀತೆಯ **ಮೊದಲನೆಯ ಅಧ್ಯಾಯವು**, ಕರ್ತವ್ಯದ ವಿಷಯದಲ್ಲಿ ಅರ್ಜುನನ ಗೊಂದಲಮಯ ಮನಸ್ಥಿತಿಯನ್ನು ತಿಳಿಸುತ್ತದೆ. ತಾನು ಪಾಪಜನಕವೆಂದು ತಿಳಿದುಕೊಂಡಿರುವ, ಆದರೆ ಈಗ ಕರ್ತವ್ಯವಾಗಿ ತನಗೆ ಒದಗಿ ಬಂದಿರುವ ಯುದ್ಧವನ್ನು ಮಾಡಬೇಕೇ ಅಥವಾ ಎಲ್ಲವನ್ನೂ ತೊರೆದು ಆತ್ಮಸಾಕ್ಷಾತ್ಕಾರಕ್ಕಾಗಿ ಧ್ಯಾನವನ್ನು ಆಚರಿಸಬೇಕೇ ಎಂಬುದೇ ಅರ್ಜುನನ ಮನಸ್ಸಿನಲ್ಲಿದ್ದ ಆ ಗೊಂದಲ.

**ಎರಡನೆಯ ಅಧ್ಯಾಯದಲ್ಲಿ**, ಶ್ರೀಕೃಷ್ಣನು ಅರ್ಜುನನಿಗೆ ಮಾನವ ಜೀವಿತದ ಗುರಿ ಆತ್ಮಸಾಕ್ಷಾತ್ಕಾರವೆಂದೂ, ಸ್ವಧರ್ಮವನ್ನು ಆಚರಿಸುತ್ತ ಫಲವನ್ನು ಭಗವಂತನಿಗೆ ಪೂಜಾರ್ಥವಾಗಿ ಅರ್ಪಿಸುವುದರಿಂದ, ಅದನ್ನು ಪಡೆಯಬಹುದೆಂದೂ ತಿಳಿಸಿಕೊಡುತ್ತಾನೆ.

ಶ್ರೀಕೃಷ್ಣ ಹೇಳುತ್ತಾನೆ:

**ಕರ್ಮಜಂ ಬುದ್ಧಿಯುಕ್ತಾ ಹಿ**
**ಫಲಂ ತ್ಯಕ್ತ್ವಾ ಮನೀಷಿಣಃ ।**
**ಜನ್ಮಬಂಧವಿನಿರ್ಮುಕ್ತಾಃ ಪದಂ**
**ಗಚ್ಛಂತ್ಯನಾಮಯಮ್ ॥**

"ಯಾರು ಕರ್ಮಫಲವನ್ನು ತ್ಯಜಿಸುತ್ತಾರೋ, ಅವರು ಆತ್ಮಸಾಕ್ಷಾತ್ಕಾರವನ್ನು ಹೊಂದಿ, ಜನ್ಮಬಂಧನದಿಂದ ಪಾರಾಗಿ ವಿಷ್ಣುವಿನ ನಿಷ್ಕಲ್ಮಷವಾದ ಮುಕ್ತಿಪದಕ್ಕೆ ಹೋಗುವರು."

ಯಾರು ಕೇವಲ ಪ್ರಾಪಂಚಿಕ ಸುಖವನ್ನು ಅರಸುತ್ತ, ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ಮಾಡುತ್ತಿರುವರೋ, ಅವರಿಗೆ ಕ್ರಮವಾಗಿ ಪುಣ್ಯ ಹಾಗೂ ಪಾಪಗಳುಂಟಾಗುವುವು. ಅವರು ಅದಕ್ಕನುಸಾರವಾಗಿ ಸ್ವರ್ಗದಲ್ಲಿ ಸುಖವನ್ನು ಅನುಭವಿಸಿಯೋ, ನರಕದಲ್ಲಿ ದುಃಖವನ್ನನುಭವಿಸಿಯೋ ಪುನಃ ಈ ಲೋಕಕ್ಕೇ ವಾಪಸ್ಸು ಬರುವರು.

**ಮೂರನೆಯ ಅಧ್ಯಾಯದಲ್ಲಿ**, ಕಾಮ ಹಾಗೂ ಕ್ರೋಧಗಳೇ ಆಧ್ಯಾತ್ಮಿಕ ಸಾಧಕನಿಗೆ ಮಹಾಶತ್ರುಗಳೆಂದು ಶ್ರೀಕೃಷ್ಣ ಹೇಳುತ್ತಾನೆ. ಆದ್ದರಿಂದ, ಒಬ್ಬನು ತನ್ನ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ದುಷ್ಕೃತ್ಯಗಳಿಂದ ವಿಮುಖನಾಗಿ, ತಾನು ಮಾಡುವ ಎಲ್ಲಾ ಕರ್ಮಗಳನ್ನೂ ಭಗವಂತನಿಗೆ ಅರ್ಪಿಸಬೇಕೆಂದು ಉಪದೇಶಿಸುತ್ತಾನೆ. ಹೀಗೆ ಮಾಡುವುದರಿಂದ ಅತಿಯಾದ ಕಾಮದ ಹಿಡಿತದಿಂದ ತಪ್ಪಿಸಿಕೊಳ್ಳಬಹುದು. ಆದರೆ ಈ ಕೆಲಸ ಸುಲಭವಾದುದಲ್ಲ. ಆದರೆ, ಸ್ವಯಂ ಭಗವಂತನೇ ಸಹಾಯ ಮಾಡಿದರೆ ಮಾತ್ರ ಸಾಧಕನಾದವನು ಸಿದ್ಧಿಯನ್ನು ಪಡೆಯಬಹುದು. ಭಗವತ್ಸಾಕ್ಷಾತ್ಕಾರದ ಅತ್ಯುನ್ನತ ಗುರಿಯನ್ನು ಪಡೆಯಲು ಸಾಮಾನ್ಯ ಮಾನವನಿಗೆ ಈ ಬಗೆಯ ಸಹಾಯ ಮಾಡಲೆಂದೇ ಭಗವಂತನು ಭುವಿಯಲ್ಲಿ ಅವತರಿಸುತ್ತಾನೆ.

**ನಾಲ್ಕನೆಯ ಅಧ್ಯಾಯದಲ್ಲಿ**, "ಯಾವ ಯಾವ ಸಮಯದಲ್ಲಿ ಧರ್ಮವು ಕಳೆಗುಂದಿ, ಅಧರ್ಮವು ತಲೆ ಎತ್ತುವುದೊ ಆಗ ನಾನು

ಸಜ್ಜನರನ್ನು ರಕ್ಷಿಸುವುದಕ್ಕಾಗಿಯೂ, ದುಷ್ಟರನ್ನು ಶಿಕ್ಷಿಸುವುದಕ್ಕಾಗಿಯೂ ಪ್ರತಿಯೊಂದು ಯುಗದಲ್ಲೂ ಅವತರಿಸುತ್ತೇನೆ" ಎನ್ನುತ್ತಾನೆ ಶ್ರೀಕೃಷ್ಣ. ಆಧ್ಯಾತ್ಮಿಕ ಜ್ಞಾನವೆನ್ನುವುದು ಎಲ್ಲ ಮಹಾಪಾಪಗಳನ್ನೂ ಕೂಡ ತೊಳೆದು ಬಿಡುತ್ತದೆ. ಶ್ರೀಕೃಷ್ಣನ ಕೆಳಗಿನ ಮಾತು ನಮಗೆಲ್ಲರಿಗೂ ಪ್ರೋತ್ಸಾಹ ದಾಯಕವಾದುದು, ಆಶ್ವಾಸನೆಯನ್ನು ನೀಡುವಂತಹದು.

**ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥**

"ನೀನು ಎಲ್ಲ ಬಗೆಯ ಪಾಪಿಗಳಿಗಿಂತಲೂ ದೊಡ್ಡ ಪಾಪಿಯಾಗಿದ್ದರೂ ಕೂಡ, ಜ್ಞಾನವೆಂಬ ನೌಕೆಯ ಸಹಾಯದಿಂದ ಆ ಎಲ್ಲ ಪಾಪಗಳನ್ನೂ ದಾಟುವೆ." [3]

**ಐದನೆಯ ಅಧ್ಯಾಯದಲ್ಲಿ,** ಉನ್ನತ ಸಾಧಕನು ಕರ್ಮಯೋಗದ ಮೂಲಕ ಕರ್ಮಗಳ ಕೆಟ್ಟ ಪರಿಣಾಮಗಳಿಂದ ತಪ್ಪಿಸಿಕೊಂಡು, ಕರ್ಮವನ್ನು ಮೀರಿಹೋಗುವ ಸ್ಥಿತಿಯನ್ನು ಪಡೆಯುವನೆಂದು ಶ್ರೀಕೃಷ್ಣನು ಹೇಳುತ್ತಾನೆ. ಅವನ ಪ್ರಕಾರ, ಕರ್ಮಸಂನ್ಯಾಸಕ್ಕಿಂತಲೂ, ಸಾಧಾರಣ ಜನರಿಗೆ ಕರ್ಮಯೋಗವೇ ಶ್ರೇಯಸ್ಕರ. ಸಂನ್ಯಾಸ ಎಂದರೆ ಕೇವಲ ಕರ್ಮತ್ಯಾಗವಲ್ಲ. ದ್ವೇಷ, ಕಾಮನೆ, ಸುಖದುಃಖಾದಿ ದ್ವಂದ್ವಗಳು– ಇವುಗಳ ಬಂಧನದಿಂದ ಮುಕ್ತನಾಗಿ ಸುಖಸ್ಥಿತಿಯನ್ನು ಪಡೆದಿರುವವನೇ ನಿಜವಾದ ಸಂನ್ಯಾಸಿ. ಕರ್ಮಯೋಗದ ಮೂಲಕವಾಗಿಯೇ ಇಂತಹ ಸಂನ್ಯಾಸವನ್ನು ಹೊಂದುವ ಸಾಮರ್ಥ್ಯ ಬರುತ್ತದೆ.

ಸಾಧಕನು ದಿನನಿತ್ಯದ ಪ್ರಪಂಚದಲ್ಲಿ ಯಾವ ರೀತಿಯ ಜೀವನವನ್ನು ನಡೆಸಬೇಕು? **ಆರನೆಯ ಅಧ್ಯಾಯದಲ್ಲಿ** ಶ್ರೀಕೃಷ್ಣನು ಸಾಧಕನಾದವನು ಅತಿಯಾದ ಉಪವಾಸ, ಅತಿಯಾದ ಭೋಜನ, ಅತಿಯಾದ ಶ್ರಮ, ಅತಿಯಾದ ಆಲಸ್ಯ, ಅತಿಯಾದ ಜಾಗರಣೆ ಹಾಗೂ ಅತಿಯಾದ ನಿದ್ರೆ – ಇವುಗಳಲ್ಲಿ ನಿರತನಾಗದೆ ಮಧ್ಯಮಪಂಥವನ್ನು ಅವಲಂಬಿಸಬೇಕೆಂದು ಹೇಳುತ್ತಾನೆ. ಇದೇ ಅಧ್ಯಾಯದಲ್ಲಿ ಯೋಗ ಅಥವಾ ಸಮಾಧಿಯ ಸುಂದರ ವಿವರಣೆ ಬರುತ್ತದೆ. ಅಂತಹ ಸ್ಥಿತಿಯನ್ನು ಪಡೆದವನು ಇಂದ್ರಿಯಾತೀತವಾದ ಮತ್ತು ಶುದ್ಧಬುದ್ಧಿಗೆ ಮಾತ್ರ ಅನುಭವಕ್ಕೆ ಬರುವ ಆತ್ಮಸುಖದಲ್ಲಿಯೇ ತೃಪ್ತಿಯನ್ನು ಹೊಂದುತ್ತಾನೆ.

**ಏಳನೆಯ ಅಧ್ಯಾಯದಲ್ಲಿ,** ಯಾರು ತನ್ನಲ್ಲಿ ಶರಣು ಬರುವರೋ ಅವರು ಮಾತ್ರ ತನ್ನ ಲೀಲಾಶಕ್ತಿಯಾದ ಮಾಯೆಯ ಬಲೆಯಿಂದ **(ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ)** ಸುಲಭವಾಗಿ ಪಾರಾಗಬಹುದೆಂದು ಶ್ರೀಕೃಷ್ಣ ಘೋಷಿಸುತ್ತಾನೆ. ಶ್ರೀರಾಮಕೃಷ್ಣರು ತಮ್ಮನ್ನು 'ನಾನು ಕರ್ಮನಾಶಾ', 'ನಾನು ಫಾರಸೀ ಡಾಂಗಾ' ಎಂದು ಕರೆದುಕೊಳ್ಳುತ್ತಿದ್ದುದನ್ನು ಗಮನಿಸಬೇಕು. 'ಕರ್ಮನಾಶಾ' ಎಂದರೆ ಯಾರು ಒಳ್ಳೆಯ ಹಾಗೂ ಕೆಟ್ಟ ಸಂಸ್ಕಾರಗಳೆರಡನ್ನೂ ನಾಶ ಮಾಡುವನೋ ಅವನು ಎಂದಾಗುತ್ತದೆ. 'ಫಾರಸೀ ಡಾಂಗಾ' ಎಂದರೆ ಫ್ರಾನ್ಸ್ ದೇಶದ ಗಡಿ ಎಂದರ್ಥ. ನೆರೆಯ ಫ್ರಾನ್ಸ್ ದೇಶದ ಗಡಿಯೊಳಗೆ ಪ್ರವೇಶಿಸುವುದರಿಂದ, ಒಬ್ಬನು ಬ್ರಿಟಿಷ್ ಆಳ್ವಿಕೆಯ ದಬ್ಬಾಳಿಕೆಯಿಂದ ಪಾರಾಗಬಹುದು. ಹಾಗೆಯೇ ಭಗವಂತನಲ್ಲಿ ಶರಣಾದರೆ, ಕರ್ಮಗಳ ಪರಿಣಾಮದಿಂದ ಮುಕ್ತನಾಗಿ, ಆತ್ಯಂತಿಕ ಆಧ್ಯಾತ್ಮಿಕ ಜ್ಞಾನವನ್ನು ಪಡೆಯಬಹುದು –ಇದೇ ಶ್ರೀರಾಮಕೃಷ್ಣರ ಮಾತಿನ ಅಭಿಪ್ರಾಯ.

**ಎಂಟನೆಯ ಅಧ್ಯಾಯದಲ್ಲಿ,** ಶ್ರೀಕೃಷ್ಣನು ಹೇಗೆ ಜ್ಞಾನಿಯು ಮಾತ್ರ ಪುನರ್ಜನ್ಮದಿಂದ ಪಾರಾಗಬಲ್ಲನೆಂಬುದನ್ನು ವಿವರಿಸುತ್ತಾನೆ. ಆದ್ದರಿಂದ ಯಾವಾಗಲೂ ಭಗವಂತನನ್ನು ನೆನೆಯುವಂತೆ ಉಪದೇಶ ನೀಡುತ್ತಾನೆ. ಆದರಿಂದ ಆತ್ಮಜ್ಞಾನವನ್ನು ಪಡೆಯಬಹುದೆಂದು ಹೇಳುತ್ತಾನೆ.

**ತಸ್ಮಾತ್ ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ।**

ಆದ್ದರಿಂದ ಅರ್ಜುನಾ, ಎಲ್ಲಾ ಕಾಲದಲ್ಲೂ ಯೋಗವನ್ನು ಅನುಷ್ಠಾನ ಮಾಡು. [4]

**ಒಂಬತ್ತನೆಯ ಅಧ್ಯಾಯದಲ್ಲಿ,** ಒಬ್ಬನು ದುಷ್ಟನೇ ಆಗಿದ್ದರೂ, ಭಕ್ತನಾಗಿದ್ದರೆ, ಅವನೂ ಕೂಡ ತನ್ನ ಸ್ವಂತದವನು ಎಂದು ಶ್ರೀಕೃಷ್ಣನು ಘೋಷಿಸುತ್ತಾನೆ. ಪರಮಾತ್ಮನು ಪ್ರತಿಯೊಬ್ಬರ ಪ್ರಾರ್ಥನೆಯನ್ನೂ ಆಲಿಸುತ್ತಾನೆ. ಅವನ ಕೃಪೆಯಿಂದ ಯಾರು ಬೇಕಾದರೂ ಕೂಡ, ತಮ್ಮ ದುಷ್ಟತನದಿಂದ ಪಾರಾಗಿ ಧಾರ್ಮಿಕರಾಗಬಹುದು **(ಕ್ಷಿಪ್ರಂ ಭವತಿ ಧರ್ಮಾತ್ಮಾ).** ಅಷ್ಟೇ ಏನು, ಯಾರಿಗೆ ವೇದಾಭ್ಯಾಸಕ್ಕೆ ಹಕ್ಕು ಇರುವುದಿಲ್ಲವೋ, ಅವರೂ ಕೂಡ ಅವನಲ್ಲಿ ಶರಣಾಗಿ ಅತ್ಯುತ್ತಮ ಜ್ಞಾನವನ್ನು ಪಡೆಯಬಹುದು ಎಂದು ಶ್ರೀಕೃಷ್ಣನು ಹೇಳುತ್ತಾನೆ.

**ಹತ್ತನೆಯ ಅಧ್ಯಾಯದಲ್ಲಿ,** ಸೃಷ್ಟಿಯಲ್ಲಿರುವ ಎಲ್ಲ ಉತ್ಕೃಷ್ಟ ವಸ್ತುಗಳಲ್ಲಿರುವುದು ತಾನೇ ಎಂದು ಶ್ರೀಕೃಷ್ಣನು ವಿವರಿಸುತ್ತಾನೆ.

**ಯದ್ ಯದ್ ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್॥**

ಯಾವುದೇ ವಸ್ತುವಾಗಲೀ ಯಾವ ವಿಷಯವಾಗಲಿ, ಉತ್ಕೃಷ್ಟತೆಯನ್ನು ತೋರಿದಲ್ಲಿ, ಅದರಲ್ಲಿ ನನ್ನ ಶಕ್ತಿಯ ಆವಿರ್ಭಾವವಿದೆಯೆಂದು ತಿಳಿ. [5]

**ಹನ್ನೊಂದನೆಯ ಅಧ್ಯಾಯದಲ್ಲಿ,** ಶ್ರೀಕೃಷ್ಣನು ಅರ್ಜುನನ ಮೇಲಿನ ವಾತ್ಸಲ್ಯದಿಂದ ಅವನಿಗೆ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಆದರೆ ಅರ್ಜುನನು ಅದರಲ್ಲಿ ಕಂಡುಬರುವ ಸಾವು ಹಾಗೂ ನಾಶಗಳ ದೃಶ್ಯಗಳಿಂದ ಭಯಗೊಳ್ಳುತ್ತಾನೆ; ಭಗವಂತನ ಸೌಮ್ಯರೂಪವನ್ನು ತೋರಿಸಲು ಪ್ರಾರ್ಥಿಸಿಕೊಳ್ಳುತ್ತಾನೆ. ಅದರಂತೆ, ಭಗವಂತನು ಅವನಿಗೆ ತನ್ನ ಸೌಮ್ಯ ರೂಪವನ್ನು ತೋರಿಸುತ್ತಾನೆ; ತನ್ನ ಈ ವಿಶ್ವರೂಪವನ್ನು ದೇವತೆಗಳು ಕೂಡ ಹಿಂದೆಂದೂ ನೋಡಿರಲಿಲ್ಲವೆಂದು ಹೇಳುವುದರ ಮೂಲಕ ಅರ್ಜುನನಿಗೆ ಸಾಂತ್ವನ ನೀಡುತ್ತಾನೆ. ಈ ರೂಪವನ್ನು ಕೇವಲ ಅನನ್ಯಭಕ್ತಿಯಿಂದ ಮಾತ್ರ ನೋಡಬಹುದು. "ಯಾವನು ನನಗಾಗಿ ಕಾರ್ಯವೆಸಗುತ್ತಾನೋ, ಯಾವನು ನನ್ನನ್ನು ಶ್ರೇಷ್ಠನೆಂದು ಭಾವಿಸುತ್ತಾನೋ, ಯಾವನು ನನ್ನನ್ನು ಪ್ರೀತಿಸುತ್ತಾನೋ, ಯಾವನು ಯಾವುದೇ ಪ್ರಾಪಂಚಿಕ ವಸ್ತುಗಳಿಗೂ ಅಂಟಿಕೊಂಡಿರುವುದಿಲ್ಲವೋ ಮತ್ತು ಯಾವನು ಎಲ್ಲಾ ಜೀವಿಗಳನ್ನೂ ಪ್ರೀತಿಸುತ್ತಾನೋ, ಅವನು ಮಾತ್ರ ನನ್ನನ್ನು ಪಡೆಯಬಲ್ಲ" ಎಂದು ಇಲ್ಲಿ ಶ್ರೀಕೃಷ್ಣ ನುಡಿಯುತ್ತಾನೆ.

**ಹನ್ನೆರಡನೆಯ ಅಧ್ಯಾಯದಲ್ಲಿ,** ತನ್ನನ್ನು ಹೊಂದಲು ಭಕ್ತಿಯೇ ಅತ್ಯುತ್ಕೃಷ್ಟವಾದ ಮಾರ್ಗ ಎಂದು ಶ್ರೀಕೃಷ್ಣನು ಪ್ರತಿಪಾದಿಸುತ್ತಾನೆ. ಯಾರು ಅವನನ್ನು ಶ್ರದ್ಧಾ–ಭಕ್ತಿಗಳಿಂದ ಪೂಜಿಸುತ್ತಾರೋ ಅವರು

ತನಗೆ ಅತ್ಯಂತ ಪ್ರೀತಿಪಾತ್ರರಾದವರು ಎಂದು ಶ್ರೀಕೃಷ್ಣನ ಅಭಿಪ್ರಾಯ.

**ಹದಿಮೂರನೆಯ ಅಧ್ಯಾಯದಲ್ಲಿ,** ಆತ್ಮನ ಹಾಗೂ ಪ್ರಕೃತಿಯ ನಿಜಸ್ವರೂಪವನ್ನು ತಿಳಿದುಕೊಳ್ಳುವುದರಿಂದ ಒಬ್ಬನು ಆತ್ಮಜ್ಞಾನವನ್ನು ಹೊಂದಬಹುದೆಂಬುದಾಗಿ ಶ್ರೀಕೃಷ್ಣ ತಿಳಿಸುತ್ತಾನೆ.

**ಹದಿನಾಲ್ಕನೆಯ ಅಧ್ಯಾಯದಲ್ಲಿ,** ಸತ್ತ್ವ, ರಜಸ್ಸು ಹಾಗೂ ತಮಸ್ಸು– ಈ ಮೂರು ಗುಣಗಳಿಂದ ಪಾರಾಗಬೇಕಾದರೆ ಭಗವಂತನಲ್ಲಿ ಶುದ್ಧ ಭಕ್ತಿಯನ್ನಿಡಬೇಕು ಹಾಗೂ ಅದರಿಂದ ಒಬ್ಬನು ಅತ್ಯುನ್ನತ ಜ್ಞಾನವನ್ನು ಹೊಂದಬಹುದೆಂದು ಶ್ರೀಕೃಷ್ಣನು ಉಪದೇಶಿಸುತ್ತಾನೆ.

**ಹದಿನೈದನೆಯ ಅಧ್ಯಾಯದಲ್ಲಿ,** ಭಗವಂತನು ಕ್ಷರವಾದ ಪ್ರಕೃತಿ, ಅಕ್ಷರವಾದ ಜೀವಾತ್ಮ – ಇವೆರಡಕ್ಕೂ ಶ್ರೇಷ್ಠವಾದ ಪುರುಷೋತ್ತಮನೇ ನಾನು ಎಂದು ಕರೆದುಕೊಳ್ಳುತ್ತಾನೆ.

**ಹದಿನಾರನೆಯ** ಅಧ್ಯಾಯದಲ್ಲಿ ೨೬ ದೈವೀಗುಣಗಳನ್ನೂ, ೬ ಆಸುರೀ ಗುಣಗಳನ್ನೂ ಶ್ರೀಕೃಷ್ಣನು ವಿವರಿಸುತ್ತಾನೆ. ಸಾಧನೆಗೆ ಸಹಾಯವಾಗುವ ದೈವೀಗುಣಗಳನ್ನು ಬೆಳೆಸಿಕೊಳ್ಳುವಂತೆಯೂ, ಆಸುರೀ ಗುಣಗಳನ್ನು ತ್ಯಜಿಸುವಂತೆಯೂ ಸಾಧಕರಿಗೆ ಸಲಹೆ ನೀಡುತ್ತಾನೆ. ಕಾಮ, ಕ್ರೋಧ ಹಾಗೂ ಲೋಭಗಳೇ ಆಸುರೀ ಗುಣಗಳಲ್ಲಿ ಪ್ರಧಾನವಾದುವುಗಳೆಂದೂ ಹೇಳುತ್ತಾನೆ **(ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ).** ಹಾಗೆಂದೇ, ಶ್ರೀರಾಮಕೃಷ್ಣರು 'ಕಾಮ–ಕಾಂಚನವನ್ನು ತ್ಯಜಿಸಿ' ಎಂದು ಮತ್ತೆ ಮತ್ತೆ ಹೇಳುತ್ತಿದ್ದುದು. ಕಾಂಚನವೆಂದರೆ 'ಲೋಭ.' ಕಾಮವೇ, ತನಗೆ ಅಡ್ಡಿಯಾದಾಗ ಕ್ರೋಧಕ್ಕೆ ತಿರುಗುತ್ತದೆ. ಕಾಮ–ಕ್ರೋಧ–ಲೋಭಗಳನ್ನು ಬಿಡುವುದೆಂದರೆ ಶ್ರೀರಾಮಕೃಷ್ಣರು ಹೇಳಿದಂತೆ, ಕಾಮ ಹಾಗೂ ಕಾಂಚನಗಳನ್ನು ವರ್ಜಿಸುವುದೇ ಆಗಿದೆ.

**ಹದಿನೇಳನೆಯ ಅಧ್ಯಾಯದಲ್ಲಿ** ಶ್ರೀಕೃಷ್ಣನು ಸಾಧಕನಿಗಿರಬೇಕಾದ ಸರಿಯಾದ ಶ್ರದ್ಧೆಯ ಬಗ್ಗೆ ಒತ್ತಿ ಹೇಳುತ್ತಾನೆ. ತನ್ನಲ್ಲಿರುವ ಶ್ರದ್ಧೆಯಿದ್ದಂತೆ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆ.

**ಹದಿನೆಂಟನೆಯ ಅಧ್ಯಾಯವು** ಗೀತೆಯ ಸಾರಾಂಶ ರೂಪದಲ್ಲಿದೆ. ಕರ್ಮ ಮಾಡದೆ ಯಾರೂ ಅಕರ್ಮಿಗಳಾದ ಸಂನ್ಯಾಸಿಗಳಾಗಲು ಸಾಧ್ಯವಿಲ್ಲ. **'ಕರ್ಮಯೋಗ'** ಮತ್ತು **'ಕರ್ಮಸಂನ್ಯಾಸ'**– ಇವೆರಡರ ಆಧಾರವೂ ಕರ್ಮವೇ. ಯಜ್ಞ–ದಾನ–ತಪಸ್ಸುಗಳನ್ನು ಯಾರೂ ಬಿಡಬಾರದು.

**ಯೋಗಸಮನ್ವಯ**

ಕೊನೆಯದಾಗಿ ಇಡೀ ಯೋಗದ ಸಾರವನ್ನು ಶ್ರೀಕೃಷ್ಣನು ಹೀಗೆ ಹೇಳುತ್ತಾನೆ:

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥**

ನನ್ನ ಕುರಿತಾಗಿಯೇ ಆಲೋಚಿಸು, ನನ್ನನ್ನೇ ಪ್ರೀತಿಸು, ನನ್ನನ್ನೇ ಪೂಜಿಸು, ನಿನ್ನೆಲ್ಲ ಕರ್ಮಗಳನ್ನೂ ನನಗೇ ಒಪ್ಪಿಸು. ನೀನು ನನಗೆ ಪ್ರಿಯನಾಗಿರುವೆಯಾದ್ದರಿಂದ ಅವಶ್ಯವಾಗಿಯೂ ನನ್ನನ್ನು ಹೊಂದುವೆ.[೫]

ಇಲ್ಲಿ ಶ್ರೀಕೃಷ್ಣನು ಭಗವಂತನನ್ನು ಅತಿಸುಲಭವಾಗಿ ಪಡೆಯಲು ಬೇಕಾದ ಜ್ಞಾನ, ಭಕ್ತಿ ಹಾಗೂ ಕರ್ಮಯೋಗಗಳ ಸಾಮರಸ್ಯವನ್ನು ಬೋಧಿಸುತ್ತಾನೆ. ಇದೇ ರೀತಿ ಇರುವ ಶ್ರೀರಾಮಕೃಷ್ಣರ ಸಂದೇಶವನ್ನು ಸ್ವಾಮಿ ವಿವೇಕಾನಂದರು ಅತ್ಯಂತ ಸಂಕ್ಷಿಪ್ತವಾಗಿ ಆದರೆ ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ:

**"ಕರ್ಮದಿಂದಲೋ, ಪೂಜೆಯಿಂದಲೋ ಅಥವಾ ಮನಸ್ಸಿನ ನಿಗ್ರಹದಿಂದಲೋ ಅಥವಾ ಜ್ಞಾನದಿಂದಲೋ, ಒಂದು ಅಥವಾ ಅದಕ್ಕಿಂತ ಹೆಚ್ಚು ಅಥವಾ ಅವೆಲ್ಲದರಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳಿ ಮತ್ತು ಮುಕ್ತರಾಗಿ. ಇದೇ ಧರ್ಮದ ಸರ್ವಸ್ವ."[೬]**

ತನ್ನ ಉಪದೇಶದ ಕಡೆಯಲ್ಲಿ ಶ್ರೀಕೃಷ್ಣ ಹೀಗೆ ಹೇಳುತ್ತಾನೆ:

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

ವಿಧಿ–ನಿಷೇಧಗಳುಳ್ಳ ಧರ್ಮವನ್ನು ಬಿಟ್ಟು, ನನ್ನನ್ನೇ ಶರಣು ಹೊಂದು. ಅದನ್ನು ತ್ಯಜಿಸಿದ್ದರಿಂದ ಉಂಟಾಗಬಹುದಾದ ಪಾಪ ದೋಷದ ಭಯದಿಂದ ದುಃಖಿಸದಿರು. ನಾನು ನಿನ್ನನ್ನು ಎಲ್ಲ ಬಗೆಯ ಪಾಪಗಳಿಂದಲೂ ಮುಕ್ತನಾಗಿಸುವೆ.[೭]

ಇದು ಭಗವಂತನ ಅತ್ಯುನ್ನತ ಕರೆ. ಅವನಿಗೆ ಧಾರ್ಮಿಕ ಆಚರಣೆಗಳು ಬೇಡ. ಅವನು ಸಾಧಕನಿಂದ ಬಯಸುವುದು ಕೇವಲ ಪ್ರೀತಿ, ಶರಣಾಗತಿ ಹಾಗೂ ತ್ಯಾಗಗಳನ್ನು ಮಾತ್ರ

ಶ್ರೀರಾಮಕೃಷ್ಣರು " 'ಗೀತಾ', 'ಗೀತಾ' ಎಂದು ಪುನಃ ಪುನಃ ಉಚ್ಚಾರ ಮಾಡುವುದರಿಂದ 'ತಾಗಿ' ಎಂದಾಗುತ್ತದೆ" ಎನ್ನುತ್ತಾರೆ. 'ತಾಗಿ' ಎಂದರೆ 'ತ್ಯಾಗ.' ಏನನ್ನು ತ್ಯಾಗ ಮಾಡುವುದು? 'ಎಲ್ಲ ಪ್ರಾಪಂಚಿಕತೆಯನ್ನು ತ್ಯಾಗಮಾಡಿ ಭಗವಂತನೊಬ್ಬನನ್ನೇ ಬಯಸುವುದು.' ಇದು ಶ್ರೀರಾಮಕೃಷ್ಣರ ಉಪದೇಶ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಮಾಡುವ ಉಪದೇಶವೂ ಇದೇ ಆಗಿದೆ.

ಹೀಗೆ, ಭಗವದ್ಗೀತೆಯಲ್ಲಿ ಪ್ರತಿಯೊಬ್ಬ ಸಾಧಕನ ವಿವಿಧ ಭಾವಗಳಿಗೆ ಅನುಗುಣವಾಗಿ ಜ್ಞಾನ, ಕರ್ಮ, ಭಕ್ತಿ ಹಾಗೂ ಧ್ಯಾನ ಅಥವಾ ರಾಜ–ಹೀಗೆ ನಾಲ್ಕು ಬಗೆಯ ಯೋಗಗಳನ್ನು ವಿವರಿಸಲಾಗಿದೆ. ಸಾಧಕನ ಅಗತ್ಯಕ್ಕೆ ತಕ್ಕಂತೆ ಅವುಗಳ ಸಾಮರಸ್ಯವನ್ನೂ ಇಲ್ಲಿ ಹೇಳಲಾಗಿದೆ.

**ಆಕರಗಳು:**

೧. ಶ್ರೀಮದ್ಭಗವದ್ಗೀತಾ, ೨:೫೧
೨. ಶ್ರೀಮದ್ಭಗವದ್ಗೀತಾ, ೪:೩೬
೩. ಶ್ರೀಮದ್ಭಗವದ್ಗೀತಾ, ೮: ೨೭
೪. ಶ್ರೀಮದ್ಭಗವದ್ಗೀತಾ, ೧೦:೪೧
೫. ಶ್ರೀಮದ್ಭಗವದ್ಗೀತಾ, ೧೮:೧೬
೬. ಸ್ವಾಮಿ ವಿವೇಕಾನಂದರ ರಾಜಯೋಗ
೭. ಶ್ರೀಮದ್ಭಗವದ್ಗೀತಾ, ೧೮:೬೬